AUGUST 23, 2025

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**‘ಆರ್ಯಭಟ ದಿಂದ ಗಗನಯಾನದ ವರೆಗೆ, ಬಾಹ್ಯಾಕಾಶ ಕ್ಷೇತ್ರದಲ್ಲಿ, ಭಾರತದ ಸಾಂಸ್ಕೃತಿಕ ಪರಂಪರೆ ಮತ್ತು ಆಧುನಿಕ ಸಾಧನೆಗಳು’ ಎಂಬ ಧ್ಯೇಯದೊಂದಿಗೆ, ಇಂದು ರಾಷ್ಟ್ರೀಯ ಬಾಹ್ಯಾಕಾಶ ದಿನವನ್ನು ಆಚರಿಸಲಾಗುತ್ತಿದೆ. ರಾಷ್ಟ್ರೀಯ ವಿಜ್ಞಾನ ವಸ್ತುಸಂಗ್ರಹಾಲಯಗಳ ಮಂಡಳಿ, ದೇಶಾದ್ಯಂತ ವಿಶೇಷ ಕಾರ್ಯಕ್ರಮಗಳನ್ನು, ನಿನ್ನೆ ಮತ್ತು ಇಂದು ಆಯೋಜಿಸಿದೆ.**

<><><>

**ಚಂದ್ರಯಾನ 3 ಮಿಷನ್ ಯಶಸ್ವಿ ಉಡಾವಣೆ, ವಿಕ್ರಮ ಲ್ಯಾಂಡರ್‌ನ ಮೃದು ಇಳಿಯುವಿಕೆ ಮತ್ತು ಚಂದ್ರನ ಮೇಲೆ ಪ್ರಜ್ಞಾನ್ ರೋವರ್, ಆಗಸ್ಟ್ 23 ರಂದು ನಿಯೋಜನೆಗೊಂಡ ಅವಿಸ್ಮರಣೀಯ ಕ್ಷಣಗಳನ್ನು ಪುನರ್ ಮನನ ಮಾಡಲು, ಇಂದು ರಾಷ್ಟ್ರೀಯ ಬಾಹ್ಯಾಕಾಶ ದಿನವನ್ನು, ರಾಜ್ಯದ ಪ್ರಾದೇಶಿಕ ವಿಜ್ಞಾನ ಕೇಂದ್ರಗಳು, ಜಿಲ್ಲಾ ವಿಜ್ಞಾನ ಕೇಂದ್ರಗಳಲ್ಲಿ ಹಾಗೂ ತಾರಾಲಯಗಳಲ್ಲಿ, ವಿಶೇಷವಾಗಿ ಆಯೋಜಿಸಲಾಗಿದೆ.**

<><><>

**ಧಾರವಾಡದ, ಸ್ವರ ಸಾಮ್ರಾಟ್ ಪಂಡಿತ್ ಬಸವರಾಜ ರಾಜಗುರು ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ರಾಷ್ಟ್ರೀಯ ಯುವ ಪುರಸ್ಕಾರಕ್ಕೆ ಧಾರವಾಡದ, ಯುವ ವಾಯೋಲಿನ್ ಪ್ರತಿಭೆ ವೀಣಾ ಶಿವಾನಂದ ದಂಡಾವತಿಮಠ ಹಾಗೂ ರಾಯಚೂರಿನ, ಯುವ ಹಾರ್ಮೋನಿಯಂ ವಾದಕ, ಚಿದಂಬರ ಜೋಶಿ ಭಾಜನರಾಗಿದ್ದಾರೆ. ರಾಷ್ಟ್ರೀಯ ಯುವ ಪುರಸ್ಕಾರ, ತಲಾ 25 ಸಾವಿರ ರೂಪಾಯಿ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ. ಯುವ ಪುರಸ್ಕಾರಕ್ಕೆ ಭಾಜನರಾದ, ಹುಬ್ಬಳ್ಳಿಯ, ವೀಣಾ ಶಿವಾನಂದ ದಂಡಾವತಿಮಠ, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಸಂತಸ ಹಂಚಿಕೊಂಡಿದ್ದಾರೆ.**

<><><>

**ವೀಣಾ ದಂಡಾವತಿಮಠ ಧ್ವನಿ 25 ಸೆಕೆಂದುಗಳು**

<><><>

**ಕರ್ನಾಟಕವನ್ನು ಶೈಕ್ಷಣಿಕವಾಗಿ ಬೆಳಗಿದ ಮಹನೀಯ, ಪೂಜ್ಯ ಸಿರಸಂಗಿ ಲಿಂಗರಾಜ ಸರದೇಸಾಯಿ ಅವರ, ಪುಣ್ಯ ಸ್ಮರಣೆ ಇಂದು. ಕೈಗಾರಿಕೆಗಳ ಖಾತೆ ಸಚಿವ ಎಂ.ಬಿ. ಪಾಟೀಲ, ಎಕ್ಸ್ ಮಾಧ್ಯಮದಲ್ಲಿ, ಭಕ್ತಿ ಪೂರ್ವಕ ನಮನಗಳನ್ನು ಸಲ್ಲಿಸಿದ್ದಾಗಿ, ತಿಳಿಸಿದ್ದಾರೆ. ಸಿರಸಂಗಿ ಲಿಂಗರಾಜ ಸರದೇಸಾಯಿ ಅವರು, ಲಿಂಗಾಯತ, ವೀರಶೈವ ಸಮಾಜದ, ಸಾಮಾಜಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಗಾಗಿ, ಪೂಜ್ಯ ಹಾನಗಲ್ಲ ಕುಮಾರ ಸ್ವಾಮಿಗಳ ಸಾನಿಧ್ಯದಲ್ಲಿ, ಅಖಿಲ ಭಾರತ ವೀರಶೈವ ಮಹಾಸಭೆಯ ಸ್ಥಾಪನೆಗೆ ನೇತೃತ್ವವಹಿಸಿ, ಅಪಾರ ಮೊತ್ತದ ದೇಣಿಗೆ ನೀಡಿದ್ದಾರೆ, ಎಂದು ಸ್ಮರಿಸಿದ್ದಾರೆ.**

ಜ್ಞಾನ ದಾಸೋಹದೊಂದಿಗೆ ಕೆರೆ ಕಟ್ಟೆಗಳ ನಿರ್ಮಾಣ, ಅನಾಥರಿಗೆ ಆಸರೆ ಸೇರಿದಂತೆ, ಹಲವು ಜನಪರ ಸೇವಾ ಕಾರ್ಯಗಳಿಗಾಗಿ, ಸಂಸ್ಥಾನದ ಆಸ್ತಿಯನ್ನೆಲ್ಲಾ ಧಾರೆ ಎರೆದ ಅವರ ತ್ಯಾಗ, ಉದಾರ ಮನೋಭಾವ, ಸದಾ ಸ್ಮರಣೀಯವಾದದ್ದು. ಅವರ ಬದುಕು ಮತ್ತು ಸಾಧನೆ ಸಮಾಜಕ್ಕೆ ದಾರಿದೀಪ ಎಂದಿದ್ದಾರೆ.

<><><>

ಶಬ್ದ ಬ್ರಹ್ಮ, ನಿಘಂಟು ತಜ್ಞ, ಪದ್ಮಶ್ರೀ ಪುರಸ್ಕೃತ ಪ್ರೊಫೆಸರ್ ಜಿ. ವೆಂಕಟಸುಬ್ಬಯ್ಯ ಅವರ ಜನ್ಮ ದಿನ ಇಂದು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಗೌರವಾರ್ಪಿಸಿ, ಕನ್ನಡ ಸಾಹಿತ್ಯ ಲೋಕಕ್ಕೆ, ಜಿ.ವಿ. ಅವರ ಅಪಾರ ಜ್ಞಾನ ಮತ್ತು ಸೇವೆ ಸಂದಿದೆ. ಅವರ ಕೊಡುಗೆ ಸದಾ ಸ್ಮರಣೀಯ, ಎಂದಿದ್ದಾರೆ.

<><><>

ಶಿವಮೊಗ್ಗದ ಹಿರಿಯ ಪತ್ರಕರ್ತ ಮುರಳೀಧರ ಖಜಾನೆ, ಗಿರೀಶ ಕಾರ್ನಾಡ ಅವರ ಸಿನೆಮಾಗಳ ಬಗ್ಗೆ, 'ಕೆಲೈಡೋಸ್ಕೋಪ್' ಕೃತಿಯ ಮೂಲಕ, ಅನುಸಂಧಾನ ನಡೆಸಿ; ಅನೇಕ ಒಳನೋಟಗಳನ್ನು ತೆರೆದಿಟ್ಟಿದ್ದಾರೆ ಎಂದು, ಹೆಸರಾಂತ ವಿಮರ್ಶಕ ಟಿ.ಪಿ. ಅಶೋಕ ತಿಳಿಸಿದ್ದಾರೆ. ಶಿವಮೊಗ್ಗದ ಬಹುಮುಖಿ ಆಯೋಜಿಸಿದ್ದ, ಕಾರ್ಯಕ್ರಮದಲ್ಲಿ, ಗಿರೀಶ ಕಾರ್ನಾಡ ಅವರ, ಸಿನಿಮಾಗಳ ಬಗ್ಗೆ ಚರ್ಚೆಗಳು ನಿರೀಕ್ಷಿತ ಪ್ರಮಾಣದಲ್ಲಿ ನಡೆದಿಲ್ಲ ಎಂದು, ಅವರು ಹೇಳಿದರು.

<><><>

ಬೀದರ ಜಿಲ್ಲೆ, ಬಸವ ಕಲ್ಯಾಣ ತಾಲೂಕು, ರಾಜೇಶ್ವರ ಗ್ರಾಮದಲ್ಲಿ, ಬೆನಕನ ಅಮಾವಾಸ್ಯೆ ಹಿನ್ನೆಲೆ, ಹೋಳ ಹಬ್ಬ, ಸಡಗರ ಸಂಭ್ರಮದಿಂದ ಜರುಗಿತು. ಪಕ್ಕದ ಮಹಾರಾಷ್ಟ್ರದಲ್ಲಿ ಪೋಳ ಹಬ್ಬ ಎಂದೂ ಕರೆಯಲಾಗುವ ಈ ಹಬ್ಬ, ರೈತರ ಹಬ್ಬವಾಗಿದೆ. ಚಿಕ್ಕ ಹಿಡುವಳಿಯ ರೈತರ, ಕೃಷಿ ಕಾಯಕದ ಬೆನ್ನೆಲುಬಾದ, ಎತ್ತುಗಳನ್ನು ಸುಂದರವಾಗಿ ಸಿಂಗರಿಸಿ, ಪೂಜಿಸಲಾಗುತ್ತದೆ. ಸಿಹಿ ಭಕ್ಷ್ಯಗಳನ್ನು ಹಂಚಲಾಗುತ್ತದೆ.

<><><>

ಭಕ್ತಿಭಾವದಿಂದ ಆಚರಿಸಲಿರುವ ಗಣೇಶೋತ್ಸವ, ಪರಿಸರ ಸ್ನೇಹಿಯಾಗಿರಲಿ; ಪ್ಲಾಸ್ಟರ್ ಆಫ್ ಪ್ಯಾರಿಸ್ – ಪಿ.ಓ.ಪಿ. ಗಣೇಶ ವಿಗ್ರಹಗಳನ್ನು, ಪ್ರಾಣ ಪ್ರತಿಷ್ಠಾಪಿಸದಂತೆ, ಪರಿಸರ ಖಾತೆ ಸಚಿವ ಈಶ್ವರ ಖಂಡ್ರೆ, ಮನವಿ ಮಾಡಿದ್ದಾರೆ. ಉಡುಪಿ, ದಕ್ಷಿಣಕನ್ನಡ ಹಾಗೂ ಉತ್ತರಕನ್ನಡ ಜಿಲ್ಲೆಗಳಲ್ಲಿ ಶೇಕಡ 90 ರ ್ಟ ಮಣ್ಣಿನ ಗಣಪತಿ ವಿಗ್ರಹಗಳನ್ನೇ ಪೂಜಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಜಿಲ್ಲಾಡಳಿತ, ತಾಲೂಕು ಆಡಳಿತ ಮತ್ತು ಸ್ಥಳೀಯ ಸಂಸ್ಥೆಗಳು, ಉಳಿದ 28 ಜಿಲ್ಲೆಗಳಲ್ಲಿ ಅಗತ್ಯ ಕ್ರಮ ಕೈಗೊಳ್ಳಲು, ಸಚಿವರು ನಿರ್ದೇಶಿಸಿ, ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿ ಎಂದು, ತಿಳಿಸಿದ್ದಾರೆ.

<><><>

ವಿಜಯಪುರ ಜಿಲ್ಲೆಯಲ್ಲಿ, ಬರುವ 27 ರಿಂದ, ಗಣೇಶ ಚತುರ್ಥಿ ಹಬ್ಬ ಆಚರಿಸಲಾಗುತ್ತಿದ್ದು, ಗಣೇಶ ವಿಗ್ರಹ ಪ್ರತಿಷ್ಠಾಪನೆ ಹಾಗೂ ವಿಸರ್ಜನೆ ಕಾಲಕ್ಕೆ, ಕಾನೂನು, ಸುವ್ಯವಸ್ಥೆ ಕಾಪಾಡಲು, ಮುನ್ನೆಚ್ಚರಿಕೆ ಕ್ರಮವಾಗಿ, ವಿಶೇ ’ ಅಧಿಕಾರಿಗಳನ್ನು ನೇಮಿಸಿ, ಜಿಲ್ಲಾಧಿಕಾರಿ ಆನಂದ  ಕ್ರಮ ಕೈಗೊಂಡಿದ್ದಾರೆ.

<><><>

ಶ್ರಾವಣ ಮಾಸದ ಅಂಗವಾಗಿ, ಧಾರವಾಡ ತಾಲೂಕು, ಅಮ್ಮಿನಬಾವಿ ಸಂಸ್ಥಾನ ಪಂಚಗೃಹ ಹಿರೇಮಠದ, ಶ್ರೀ ಅಭಿನವ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಅವರ, ಒಂದು ತಿಂಗಳ ಕಾಲದ, ಸಾಮೂಹಿಕ ಇ ್ಟಲಿಂಗ ಪೂಜೆ ಸಂಪನ್ನಗೊಂಡಿತು. ಹುಬ್ಬಳ್ಳಿ – ಧಾರವಾಡ ಸೇರಿದಂತೆ ಸುತ್ತಲಿನ ಹಲವಾರು ಗ್ರಾಮಗಳ ಭಕ್ತರು, ಭಕ್ತಿ ಸಮರ್ಪಿಸಿದರು.

<><><>

**ಕೇಂದ್ರ ಪುರಸ್ಕೃತ, ಆರ್ಥಿಕ ಹಾಗೂ ಸಾಮಾಜಿಕ ಭದ್ರತಾ ಯೋಜನೆಗಳು ಸೇರಿದಂತೆ, ಕೇಂದ್ರ ಸರ್ಕಾರದ ವಿವಿಧ ಜನಪರ ಯೋಜನೆಗಳ ಕುರಿತು, ಚಾಮರಾಜನಗರದ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದಲ್ಲಿ, ವಿದ್ಯಾರ್ಥಿಗಳಿಗಾಗಿ, ವಿಶೇಷ ಕಾರ್ಯಕ್ರಮ ಆಯೋಜಿತವಾಗಿತ್ತು. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಸಂಯುಕ್ತಾಶ್ರಯದಲ್ಲಿ, ಆಯೋಜಿತ, ಕಾರ್ಯಾಗಾರವನ್ನು, ನಗರಸಭೆ ಆಯುಕ್ತ ರಾಮದಾಸ್ ಉದ್ಘಾಟಿಸಿದರು.**

<><><>

**ರಾಜ್ಯಾದ್ಯಂತ, ಕರಾವಳಿ ಮತ್ತು ಮಲೆನಾಡು ಜಿಲ್ಲೆಗಳಲ್ಲಿ, ಚದುರಿದಂತೆ ವ್ಯಾಪಕವಾಗಿ, ಹಗುರದಿಂದ ಸಾಧಾರಣ ಮಳೆ, ಹಾಗೂ 26 ರಿಂದ, ಅಲ್ಲಲ್ಲಿ ಭಾರಿ ಮಳೆ ಸಾಧ್ಯತೆ ಇದೆ ಎಂದು, ಹವಾಮಾನ ಇಲಾಖೆ ತಿಳಿಸಿದೆ. ಒಳನಾಡು ಜಿಲ್ಲೆಗಳಲ್ಲಿ ಗುಡುಗು, ಮಿಂಚು ಹಾಗೂ ಜೋರಾದ ಗಾಳಿಯೊಂದಿಗೆ ಅಲ್ಲಲ್ಲಿ ಚದುರಿದಂತೆ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು, ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಪ್ರಕಟಿಸಿದೆ.**

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**